# 'ಎರಡಿಲ್ಲದ ಬಾಳೆ ಪೂರ್ಣ'

ಬೆಳಗಾವಿಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ 'ಕಂನಾಡ ವೈಶಿಷ್ಟ್ಯಕ್ಕೆ ಪ್ರಾಶಸ್ತ್ಯವಿರಬೇಕೆಂಬಧ್ವನಿಯೆದ್ದಿತು'. ಇದರ ನಂತರ ಬೆಳಗಾವಿಯಲ್ಲಿ ಕಡಪಾ ರಾಘವೇಂದ್ರರಾಯರು, ಆಲೂರು ವೆಂಕಟರಾಯರು, ನರಗುಂದ ರಾಮರಾಯರ ಸಮ್ಮುಖದಲ್ಲಿ ಮಂಗಳವೀಡು ಶ್ರೀನಿವಾಸರಾಯರು ಮತ್ತು ಶಂಬಾ ಜೋಶಿ ಅವರ ಕಾರ್ಯದರ್ಶಿಗಳಾಗಿದ್ದ 'ಕರ್ನಾಟಕ ಏಕೀಕರಣ'ದ ಮೊದಲ ಸಮ್ಮೇಳನವು ಜರುಗಿತು. 'ಹೆಣ ಹೊರುವುದರಿಂದ, ಖಾದಿ ಮಾರುವವರೆಗಿನ ಎಲ್ಲ ಕೆಲಸಗಳನ್ನು ಸಾರ್ವಜನಿಕ ಸೇವೆ' (ಶಂಬಾ ಜೋಷಿ) ಎಂದು ಭಾವಿಸಿದ್ದ ನೂರಾರು ಕಾರ್ಯಕರ್ತರ ಅವಿರತ ದುಡಿಮೆಯಿಂದ ಈ ಸಮ್ಮೇಳನ ಕನ್ನಡಿಗರಲ್ಲಿ ಅರಿವು ಮೂಡಿಸುವುದರಲ್ಲಿ ಯಶಸ್ವಿಯಾಯಿತು.

'ಖಾದಿ, ಅಸ್ಪೃಶ್ಯೋದ್ಧಾರ, ಗ್ರಾಮೋದ್ಧಾರ'ಗಳ ಜೊತೆಗೆ ನಾಡಿಗಾಗಿ ಏನಾದರೂ ಮಾಡಬೇಕು ಎಂಬ ಸಂಕಲ್ಪತೊಟ್ಟ ಅಸಂಖ್ಯ ರಾಷ್ಟ್ರೀಯವಾದಿಗಳು ಮತ್ತು ಸಮಗ್ರ ಕರ್ನಾಟಕತ್ವದ ಪರ ಇರುವ ಚಿಂತಕರು, ಲೇಖಕರು ಹಾಗೂ ನಾಡು ನುಡಿಗಾಗಿ ಎಣ್ಣೆ–ಬತ್ತಿಯಂತೆ ತಮ್ಮನ್ನು ತಾವೇ ಸುಟ್ಟುಕೊಂಡು, ಸಮಾಜದ ಕಣ್ಣುಗಳಿಗೆ ಬೆಳಕು ತಂದುಕೊಟ್ಟ ನಮ್ಮ ಪೂರ್ವಿಕರು ಇವರು. ಕರ್ನಾಟಕವನ್ನು ಎಂದೂ ಎರಡು ಮಾಡಲು ಯೋಚಿಸದ ಈ ಕನಸುಗಾರರ ಗುಂಪು ಒಂದು ಹಂತದಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಬೆಂಗಳೂರು ಮತ್ತು ಧಾರವಾಡದಲ್ಲಿ ಪ್ರತ್ಯೇಕವಾಗಿರಬೇಕೆಂಬ ಹಟಕ್ಕೆ ಬಿದ್ದಾಗ, 'ಪ್ರತ್ಯೇಕತ್ವಕ್ಕಿದು ಮಾರಕ ಕನ್ನಡಕ್ಕೆ, ಕನ್ನಡ ಜನಕ್ಕೆ ಒಂದೇ ಸಾಹಿತ್ಯ ಪರಿಷತ್ತಿರಬೇಕು. ಅದು ಕರ್ನಾಟಕದ ಸಮಗ್ರತೆ, ಏಕತ್ವಗಳ ದೃಷ್ಟಿಯಿಂದ ಬೆಂಗಳೂರಲ್ಲಿ ಇರಬೇಕು' ಎಂದು ಎಲ್ಲರನ್ನೂ ಒಪ್ಪಿಸಿದವರು ಆಲೂರು ವೆಂಕಟರಾಯರು. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಎರಡಾಗಿ ಒಡೆಯದೆ, 'ಎರಡಿಲ್ಲದ ಬಾಳೆ ಪೂರ್ಣ' (ಶಂಬಾ ಜೋಷಿ) ಎಂದು ನಂಬಿದ ಕನಸುಗಾರರ ಮುಂಗಾಣ್ಕೆಯ ಫಲವಾಗಿಯೇ ಕರ್ನಾಟಕ ಏಕೀಕರಣ 'ಫಲ' ಕೊಟ್ಟಿತು.

ರಾಷ್ಟ್ರೀಯ ವಿಮೋಚನೆ ಎನ್ನುವುದು ವಸಾಹತುಶಾಹಿಯಿಂದ ರಾಜಕೀಯ ಬಿಡುಗಡೆ ಪಡೆಯುವುದಾಗಿದ್ದರೆ, ಕರ್ನಾಟಕ ಏಕೀಕರಣದ ಆಂದೋಲನವು ನಾಡಿನ ಸಾಂಸ್ಕೃತಿಕ ವಿಮೋಚನೆಯದ್ದು. ಕನ್ನಡ ನಾಡು ಮತ್ತು ಕನ್ನಡ ಭಾಷೆಯ ಅಸ್ಮಿತೆಗಾಗಿ ನಡೆದ ಹೋರಾಟ. ಈ ಹೋರಾಟವು ಕೇವಲ 'ಕನ್ನಡ' ಭಾಷೆಯ ಮೇಲಿನ ಮೋಹದಿಂದ ಮೂಡಿದ್ದಾಗಿರದೆ, ಈ ನೆಲದ ಶ್ರೀ ಸಾಮಾನ್ಯನ ಬಿಡುಗಡೆಯೂ ಆಗಿತ್ತು ಎನ್ನುವುದನ್ನು ಕುವೆಂಪು ಅವರು ಅತಿ ಎಚ್ಚರದಿಂದ ತೋರಿಸಿದರು. ಹೀಗಾಗಿಯೇ ಏಕೀಕರಣ ಚಳವಳಿ ಅನ್ಯ ಭಾಷೆಗಳ ದ್ವೇಷ, ಅಸಹಿಷ್ಣುತೆಯ ರೂಪ ತಾಳದೆ, ಕುವೆಂಪು ಅವರ ವೈಚಾರಿಕ ತಿಳಿವಿನ ಮೂಲಕ ಕರ್ನಾಟಕತ್ವವು 'ಸರ್ವಜನಾಂಗದ ಶಾಂತಿಯ ತೋಟ'ವಾಗಿ, ತನ್ನೊಳಗೆ ಸಹಿಷ್ಣುತೆಯ ಮೂರ್ತಿ ಶಿಲ್ಪವನ್ನು ಕಡೆದುಕೊಂಡಿತು.

1953ರಲ್ಲಿ ಕರ್ನಾಟಕದಲ್ಲಿ ಏಕೀಕರಣ ಹೋರಾಟ ನಡೆಯುತ್ತಿದ್ದ ಸಮಯದಲ್ಲಿ ಬಳ್ಳಾರಿಯ ಕರ್ನಾಟಕ ಕ್ರಿಯಾ ಸಮಿತಿಯ ಸದಸ್ಯ, ಕಟ್ಟಾ ಕನ್ನಡ ಪ್ರೇಮಿ ರಂಜಾನ್ ಸಾಹೇಬ್ ಅವರ ಮೇಲೆ, ಬಳ್ಳಾರಿ ಪ್ರಾಂತ್ಯವನ್ನು ಕರ್ನಾಟಕಕ್ಕೆ ಸೇರಿಸಲು ಅಡ್ಡಿಯಾಗಿದ್ದ ಗುಂಪೊಂದು ಆಸಿಡ್ ಎರಚಿ ಹತ್ಯೆ ಮಾಡಿತು. ಕರ್ನಾಟಕ ಏಕೀಕರಣ ಚಳವಳಿಗಾಗಿ ರಂಜಾನ್ ಸಾಹೇಬ್ ಅವರ ಬಲಿದಾನವಾಯಿತು. ನಮ್ಮ ನಾಡು–ನುಡಿಗಾಗಿ ಆದ ಈ ಬಲಿದಾನದ ಚರಿತ್ರೆಯ ಅರಿವು ಕನ್ನಡಿಗರ ಪ್ರಜ್ಞೆಯಲ್ಲಿ ಸದಾ ದೀವಟಿಗೆಯಂತೆ ಉರಿಯುತ್ತಿರಬೇಕು. ಇಲ್ಲವಾದಲ್ಲಿ ರಂಜಾನ್ ಸಾಹೇಬ್ ಅವರ ಆತ್ಮ ಸ್ವರ್ಗದ ಬಾಗಿಲಲ್ಲೇ ನಿಂತು ಪರಿತಪಿಸುತ್ತಿರುತ್ತದೆ.

'ಹೊಸ ರಾಜ್ಯವು ಕೇವಲ ಅರ್ಥ ಕಾಮಗಳೆಂಬ ಎರಡೇ ಪುರುಷಾರ್ಥಗಳಿಗಾಗಿ ಹೆಣಗದೆ, ಚತುರ್ವಿಧ ಪುರುಷಾರ್ಥಗಳನ್ನೂ ಪ್ರಜೆಗಳು ಪಡೆಯುವುದಕ್ಕೆ ಸಾಧನವಾಗಲಿ. ನಮ್ಮ ನಾಡಿನಲ್ಲಿ ಧರ್ಮದ ವೇಷಕ್ಕೆ, ಜಾತಿ ದ್ವೇಷಕ್ಕೆ ಇಲ್ಲವೇ ಪಕ್ಷ ದ್ವೇಷಕ್ಕೆ ಇಂಬಿಲ್ಲ. ರಾಜ್ಯವು ಸುಪ್ರಜಾ ರಾಜ್ಯವೆನಿಸುವುದಕ್ಕೆ ಬಹುಸಂಖ್ಯಾಕರ ತುಷ್ಟಿಪುಷ್ಟಿಗಳಿಗಿಂತಲೂ ಅಲ್ಪಸಂಖ್ಯಾಕರ ತುಷ್ಟಿಪುಷ್ಟಿಗಳೇ ಹೆಚ್ಚಿನ ಮಾಪಕಗಳು' (ಕರ್ನಾಟಕತ್ವದ ವಿಕಾಸ: ಆಲೂರು ವೆಂಕಟರಾಯರು). ಈ ಬಗೆಯ ಉನ್ನತ ಅರಿವಿನೊಂದಿಗೆ ಅಸ್ತಿತ್ವಕ್ಕೆ ಬಂದಿರುವ ಅಖಂಡ ಕರ್ನಾಟಕವು ಎರಡಾಗುವುದನ್ನು ಕನ್ನಡಿಗರು ಕನಸಿನಲ್ಲೂ ಊಹಿಸಿಕೊಳ್ಳಲಾರರು.

'ಗರತಿಯ ಹಾಡು' ಕನ್ನಡದ ಮೊಟ್ಟಮೊದಲ ಜನಪದ ತ್ರಿಪದಿಗಳ ಸಂಗ್ರಹ ಪ್ರಕಟಗೊಂಡು ಇದೀಗ ತೊಂಬತ್ತು ವರ್ಷಗಳು ತೀರಿವೆ. ಕರ್ನಾಟಕ ಏಕೀಕರಣದ ಕ್ರಿಯಾ ರೂಪದಂತಿರುವ ಈ ಅಪರೂಪದ ಕೃತಿ, ಹಲಸಂಗಿ ಚೆನ್ನಮಲ್ಲಪ್ಪ (ಮಧುರ ಚನ್ನ), ಲಿಂಗಪ್ಪ ಮತ್ತು ಕಾಪ್ಸೆ ರೇವಪ್ಪ ಹಾಗೂ ಹಲಸಂಗಿ ಸೋದರರ ಸತತ ಪರಿಶ್ರಮದಿಂದ 1931ರಲ್ಲಿ ಪ್ರಕಟಗೊಂಡಿತು. ಈ ಜನಪದ ತ್ರಿಪದಿಗಳ ಸಂಗ್ರಹಕ್ಕೆ ತೊಡಗಿಕೊಂಡವರಲ್ಲಿ ಬಹುಪಾಲು ರಾಷ್ಟ್ರೀಯತೆ ಮತ್ತು ಕರ್ನಾಟಕ ಏಕೀಕರಣದ ಕನಸುಕಂಡ ಪ್ರತಿಭಾವಂತರು ಇದ್ದರು. ಈ ಹಿನ್ನೆಲೆಯಲ್ಲಿ ಈ ತ್ರಿಪದಿಗಳ ಸಂಗ್ರಹಕ್ಕೆ ಸಾಹಿತ್ಯಕ ಹಿನ್ನೆಲೆ ಇರುವಂತೆಯೇ ಸಮಗ್ರ ಕರ್ನಾಟಕತ್ವದ ಬೇರುಗಳೂ ಇವೆ.

'ಗರತಿಯ ಹಾಡು' ಸಂಗ್ರಹದ ತ್ರಿಪದಿಗಳು ತುಂಗಭದ್ರಾ ನದಿಯನ್ನು ದಾಟಿ ಹಳೆ ಮೈಸೂರಿನ ಭಾಗಗಳಲ್ಲೂ ಕಾಣಸಿಗುವ ಜನಪದ ತ್ರಿಪದಿಗಳನ್ನು ಒಳಗೊಂಡಿವೆ. ಹೀಗಾಗಿ ಒಂದು ರೀತಿಯಲ್ಲಿ ಕರ್ನಾಟಕವನ್ನು ಭೌಗೋಳಿಕವಾಗಿ, ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಸೆಯುವ ಕೆಲಸವನ್ನೂ ಈ ಸಂಗ್ರಹ ಮಾಡುತ್ತದೆ. 'ಬೀದರ, ಹೈದ್ರಾಬಾದಗಳ ಉತ್ತರದ ತುದಿಯಿಂದ ನೀಲಗಿರಿ ಕೊಯಿಮತ್ತೂರಿನ ದಕ್ಷಿಣದ ತುದಿಯವರೆಗೆ ಹಬ್ಬಿರುವ ಕರ್ನಾಟಕವು ಒಂದೆಂಬುದಕ್ಕೆ ಒಂದು ನಿದರ್ಶನವು ಈ ಹಾಡುಗಳಲ್ಲಿದೆ' (ದ.ರಾ. ಬೇಂದ್ರೆ: ಗರತಿಯ ಹಾಡು). ಭಾಷಿಕವಾಗಿ ಈ ಸಂಗ್ರಹದ ತ್ರಿಪದಿಗಳು ಕನ್ನಡ ಭಾಷೆಯ ಬಹುತ್ವವನ್ನು ಸಾರುವ ಸಂಗ್ರಹವೂ ಹೌದು. ರಾಷ್ಟ್ರೀಯ ಆಂದೋಲನದ ಜೊತೆಯಲ್ಲಿಯೇ ಕರ್ನಾಟಕ ಏಕೀಕರಣದ ಧ್ವನಿ ತಾರಕ ಸ್ವರದಲ್ಲಿ ಮೊಳಗುತ್ತಿದ್ದ ಹಿನ್ನೆಲೆಯಲ್ಲಿ, ಕರ್ನಾಟಕದ ಮನಸ್ಸುಗಳನ್ನು, ಕನ್ನಡದ ಅಸ್ಮಿತೆಗಾಗಿ ಸಾಂಸ್ಕೃತಿಕವಾಗಿ ಬೆಸೆಯುವಲ್ಲಿ ಈ ಸಂಗ್ರಹದ ಪಾತ್ರವೂ ಮಹತ್ವದ್ದು.

ಹೀಗಾಗಿ 'ಗರತಿಯ ಹಾಡು' ಸಂಗ್ರಹವು, ಎಲ್ಲ ರೂಪಗಳನು ದಾಟಿ ಕರ್ನಾಟಕದ ಒಳಗೇ ಇರುವ ಅನೇಕತೆಯನ್ನು ಕೂಡಿಸುವ ಹಾಡು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ತುಕ್ಕು ಹಿಡಿದ ಕಬ್ಬಿಣದಂತೆ ನಶಿಸಿಹೋಗಬೇಡಿ. ತೇದ ಗಂಧ ಸೂಸುವ ಪರಿಮಳವನ್ನು ಬಿಟ್ಟುಹೋಗಿ.
  —ಎಂ. ವಿಶ್ವೇಶ್ವರಯ್ಯ
- ಮೊದಲು ನಿನ್ನನ್ನು ತಿರಸ್ಕರಿಸುತ್ತಾರೆ. ಆಮೇಲೆ ನಿನ್ನನ್ನು ನೋಡಿ ನಗ್ತಾರೆ. ಅದಾದ ಮೇಲೆ ನಿನ್ನ ವಿರುದ್ಧ ತಿರುಗಿ ಬೀಳುತ್ತಾರೆ. ನೀನು ಗೆಲ್ಲೋದು ಆಗಲೇ.
  —ಮಹಾತ್ಮ ಗಾಂಧಿ
- ಅದೃಷ್ಟ ಅಂದರೆ ಅವಕಾಶವನ್ನು ಪಡೆಯುವವನು. ಬುದ್ಧಿವಂತ ಅಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.
  —ಸ್ವಾಮಿ ವಿವೇಕಾನಂದ
- ಸದಾ ಚಟುವಟಿಕೆಯಿಂದ ಇರುವ ಜೀವನದ ಖಾಲಿತನದ ಬಗ್ಗೆ ಎಚ್ಚರದಿಂದಿರಿ.
  —ಸಾಕ್ರೆಟಿಸ್
- ನಿಮ್ಮ ಕನಸನ್ನು ನೀವು ಕಟ್ಟಿಕೊಳ್ಳದಿದ್ದರೆ, ಬೇರೆಯವರು ಅವರ ಕನಸು ಕಟ್ಟಿಕೊಳ್ಳಲು ನಿಮ್ಮನ್ನು ಬಳಸಿಕೊಳ್ಳುತ್ತಾರೆ.
  —ಟೋನಿ ಗಾಸ್ಕಿನ್ಸ್
- ಶಿಕ್ಷಣದ ಬೇರುಗಳು ಕಹಿ ಇರಬಹುದು. ಆದರೆ, ಅದರ ಫಲ ಸಿಹಿಯಾಗೇ ಇರುತ್ತದೆ.
  —ಅರಿಸ್ಟಾಟಲ್
- ಹೊಗಳಿಕೆಯ ಮಾಲಿನ್ಯವನ್ನು ತೊಡೆದು ಹಾಕಲು ಏಕಮಾತ್ರ ಉಪಾಯ: ಕೆಲಸ ಮತ್ತು ಇನ್ನಷ್ಟು ಕೆಲಸ.
  —ಆಲ್ಬರ್ಟ್ ಐನ್ ಸ್ಟೀನ್
- ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮವನ್ನು ತಾವೇ ಕಂಡುಕೊಳ್ಳಬೇಕು. ಧರ್ಮದ ದಾರಿ ಒಂದಲ್ಲ, ಹಲವು.
  —ಕೆ.ಎಂ. ಮುನ್ಷಿ